

ಅಷ್ಟೇ ಸನ್ನಿ ಹಿಡಿದಂತೆ ರಂಗು ಬದಲಾಯಿಸುತ್ತಲೇ ಇರುತ್ತದೆ. ಕೆಲವೊಮ್ಮೆ ಮಳೆ, ಮತ್ತೆ ಧುತ್ತನೆ ಮಂಜು, ಕೊಂಚ ಬಿಸಿಲು, ಸಡನ್ನಾಗಿ ಬೀಸುವ ಶೀತದ ಗಾಳಿ. ಉಳಿದಂತೆ ಕಾಲಿಕ್ಕಿದ ಕಡೆಯೆಲ್ಲಾ ಮುತ್ತು ಕೊಟ್ಟು ಮಾತಾಡಿಸುವ ಇಂಬಳಗಳು.

ಇಲ್ಲಿನ ಗಟ್ಟಿಮೋಡಗಳ ಒಳಗೆ ಮುಳುಗಿ ಹೋದರೆ ಐದು ಅಡಿ ದೂರದಲ್ಲಿರುವವರೂ ಕಾಣುವುದಿಲ್ಲ. ನಾವು ಮೂನಾರ್ ಹೋಗುವಾಗಲೇ ಸಂಜೆಯಾಗಿದ್ದ ಕಾರಣ ನಮಗೆ ಹೊರಡಲು ಹೆಚ್ಚು ಸಮಯವೂ ಉಳಿದಿರಲಿಲ್ಲ. ರಾತ್ರಿಯ ಊಟ ಬೇಗ ಮುಗಿಸಿ, ಕತ್ತಲಲ್ಲಿ ಶಿಕಾರಿಗೆ ಹೊರಡಬೇಕಿತ್ತು. ಪ್ರಯಾಣದ ಆಯಾಸವನ್ನು ಬದಿಗಿಟ್ಟು ಲಗುಬಗೆಯಿಂದ ಜರ್ಕಿನ್ ತೊಟ್ಟು, ಗಮ್‌ಬೂಟು ಧರಿಸಿ, ಹೆಡ್ ಟಾರ್ಚ್ ಸಿಕ್ಕಿಸಿಕೊಂಡು ಸಿದ್ಧವಾದೆವು. ಜೊತೆಗೆ ದೊಡ್ಡ ಛತ್ರಿಯೂ ಕಡ್ಡಾಯವಾಗಿ ಇರಲೇ ಬೇಕಿತ್ತು. ಮುಂದೆ ನಮ್ಮನ್ನು ಈ ದಂಡಯಾತ್ರೆಗೆ ಕರೆದುಕೊಂಡು ಹೋಗುವ ಹ್ಯಾಡ್ಲಿ ರಂಜೀತ್ ದಂಪತಿಗಳಿಗಾಗಿ ಕಾಯತೊಡಗಿದೆವು. ಪರಸ್ಪರ ಪ್ರೀತಿಸಿ ಮದುವೆಯಾದ ಇವರಿಬ್ಬರು ಕಿರು ಹರೆಯದವರು. ನನ್ನ ಒಟ್ಟು ಫೋಟೊಗ್ರಫಿ ಪಯಣದಲ್ಲಿ ನಾ ಕಂಡ ಅಪರೂಪದ ಜೋಡಿಗಳು ಇವರು ಎಂದು ನಿಸ್ಸಂದೇಹವಾಗಿ ಹೇಳಬಹುದು. ಇಷ್ಟೊಂದು ಬದ್ಧತೆಯ ನಿಸರ್ಗತಜ್ಞ ಪ್ರತಿಭೆಗಳನ್ನು ಮತ್ತೆ ನಾನು ಜೀವನದಲ್ಲಿ ನೋಡುತ್ತೇನೋ, ಇಲ್ಲವೋ? ಗೊತ್ತಿಲ್ಲ. ಇವರ ಶ್ರಮ, ತಿಳಿವಳಿಕೆಯ ಮಟ್ಟ, ಕೆಲಸ ಮಾಡುವ ರೀತಿಯನ್ನು ನಾನೊಂದು ದಿವಸವೂ ಮಾಡಲಾರೆ. ನಿಜವಾಗಿ ಇವರ ಬಗ್ಗೆ ಅಂತಹ ಗೌರವ ಭಾವನೆ ಅಂದೇ ಹುಟ್ಟಿತು. ಹುಚ್ಚರಷ್ಟೇ ಇಷ್ಟು ರಿಸ್ಕ್ ಎನಿಸುವ ಕಸುಬು ಮಾಡಲು ಸಾಧ್ಯ.

ರಾತ್ರಿ ಎಂಟಕ್ಕೆ ನಾವು ಉಳಿದಿದ್ದ ಕಾಡಿನ ಮನೆಯ ಮುಂದೆಯೇ ಇದ್ದ ಬೆಟ್ಟವೊಂದನ್ನು ಹತ್ತಿಸಿದರು. ಅಲ್ಲಿನ ಟೀ ಗಿಡಗಳ ಮೇಲೆ ಪುಟಾಣಿ ಕಪ್ಪೆಗಳು ಕೂರುವ ಹೊತ್ತಿದು. ತಡವಾದರೆ ಅವು ಹೊರಟೇ ಹೋಗುತ್ತವೆ ಎಂದು ಅವಸರಿಸಿದರು. ಹೀಗಾಗಿ ಟಾರ್ಚ್ ಲೈಟ್ ಬಳಸಿ ಕಳ್ಳರಂತೆ ಕೂತ ಅವುಗಳನ್ನು ಹುಡುಕಿ ತೆಗೆಯಬೇಕಿತ್ತು. ಗಂಡು ಕಪ್ಪೆಗಳು ತಮ್ಮ ಸಂಗಾತಿಗಳ ಪ್ರಣಯಕ್ಕೆ ಬರಹೇಳಲು ಕಿರ್.. ಕಿಟ್ರ್ ಎಂದು ಶಬ್ದ ಮಾಡುತ್ತವೆ. ಗದ್ದದಲ್ಲಿ ಗಾಳಿ ತುಂಬಿಸಿ, ಬಲೂನಿನಂತೆ ಹಿಗ್ಗಿಸಿಕೊಂಡು ಸತತ ಅರಚುವ ಇವುಗಳ ಇರುವಿಕೆ ಪತ್ತೆ ಹಚ್ಚಬಹುದು. ಹೇಳಲು ಸುಲಭ ಎನಸಿದರೂ ರಾತ್ರಿ ಹೊತ್ತು ಈ ಕಸುಬು ಮಾಡುವುದು ತುಸು ಕಷ್ಟ. ಎಷ್ಟೋ ಸಲ ಶಬ್ದ ಬರುವ ದಿಕ್ಕಿಗೂ ಅವು ಕೂತಿರುವ ಜಾಗಕ್ಕೂ ತಾಳೆಯೇ ಆಗುವುದಿಲ್ಲ. ಅಲ್ಲಲ್ಲಿ ಇಣುಕಿ, ಗಿಡಗಂಟಿ ಸರಿಸಿ ಕುತೂಹಲದಿಂದ ಗಮನಿಸುವ